KA / BG - GPO/ 2515 /WPP-47/ 2009 - 2011

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

| ಭಾಗ – III | ಬೆಂಗಳೂರು, ಶುಕ್ರವಾರ, ಅಕ್ಟೋಬರ್ ೧೫, ೨೦೧೦ (ಆಶ್ವಯುಜ ೨೩, ಶಕ ವರ್ಷ ೧೯೩೨) | ನಂ. ೧೦೬೮ |
|---|---|---|

## ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

## ರಾಜ್ಯ ಚುನಾವಣಾ ಆಯೋಗದ ನಡವಳಿಗಳು

**ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ : ರಾಚುಆ.254.ಟಿಜೆಡ್‌ಪಿ.2010, ಬೆಂಗಳೂರು, ದಿನಾಂಕ: 15–10–2010**

ವಿಷಯ : ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 121, 122 ಹಾಗೂ 123 ರಡಿಯಲ್ಲಿ ತಾಲ್ಲೂಕು ಪಂಚಾಯತಿಗೆ ಹಾಗೂ ಪ್ರಕರಣ 161 ಮತ್ತು 162 ರಡಿಯಲ್ಲಿ ಜಿಲ್ಲಾ ಪಂಚಾಯಿತಿಗೆ ವರ್ಗವಾರು ಸದಸ್ಯರ ಸ್ಥಾನಗಳನ್ನು ಮೀಸಲಿರಿಸಿ ನಿಗದಿಪಡಿಸುವ ಬಗ್ಗೆ ಮಾರ್ಗಸೂಚಿ.

ರಾಜ್ಯ ಚುನಾವಣಾ ಆಯೋಗವು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 121, 122 ಹಾಗೂ 123 ರಡಿಯಲ್ಲಿ ತಾಲ್ಲೂಕು ಪಂಚಾಯತಿಗೆ ಒಟ್ಟು ಸದಸ್ಯರ ಸ್ಥಾನಗಳು ಹಾಗೂ ವರ್ಗವಾರು ಸದಸ್ಯರ ಸ್ಥಾನಗಳನ್ನು ಮತ್ತು ಪ್ರಕರಣ 161 ಮತ್ತು 162 ರಡಿಯಲ್ಲಿ ಜಿಲ್ಲಾ ಪಂಚಾಯತಿಗೆ ವರ್ಗವಾರು ಸದಸ್ಯರ ಸ್ಥಾನಗಳನ್ನು ಮೀಸಲಿರಿಸಿ ನಿಗದಿಪಡಿಸಬೇಕಾಗಿರುತ್ತದೆ. ಸದರಿ ವರ್ಗವಾರು ಸ್ಥಾನಗಳನ್ನು ಮೀಸಲಿರಿಸುವ ಕಾರ್ಯವು ಪಾರದರ್ಶಕವಾಗಿ ಮತ್ತು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಮಾಡುವುದು ಅವಶ್ಯವಾಗಿರುವುದರಿಂದಲೂ ಹಾಗೂ ಸದರಿ ಅಧಿನಿಯಮದಡಿ ಸ್ಥಾನಗಳನ್ನು ಮೀಸಲಿರಿಸಿ ನಿಗದಿಪಡಿಸುವ ಕಾರ್ಯ ವಿಧಾನಕ್ಕೆ ಸಂಬಂಧಿಸಿದಂತೆ ವಿವರವಾದ ಮಾಗದರ್ಶವನ್ನೊಳಗೊಂಡ ಉಪಬಂಧವಿಲ್ಲದಿರುವುದರಿಂದಲೂ ಸೂಕ್ತ ಮಾರ್ಗದರ್ಶನವನ್ನು ರಾಜ್ಯ ಚುನಾವಣಾ ಆಯೋಗವೇ ಹೊರಡಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದುದರಿಂದ ಭಾರತ ಸಂವಿಧಾನದ ಅನುಚ್ಛೇದ 243ಕ್ಕೆ ರ ಖಂಡ (1) ಹಾಗೂ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 (1993 ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ನೇದರ ಪ್ರಕರಣ 121, 122, 123, 161, 162 ಹಾಗೂ 308 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ರಾಜ್ಯ ಚುನಾವಣಾ ಆಯೋಗವು ತಾಲ್ಲೂಕು ಪಂಚಾಯತಿಗೆ ಒಟ್ಟು ಸದಸ್ಯರ ಸ್ಥಾನಗಳು ಹಾಗೂ ವರ್ಗವಾರು ಸದಸ್ಯರ ಸ್ಥಾನಗಳನ್ನು ಮತ್ತು ಜಿಲ್ಲಾ ಪಂಚಾಯತಿಗೆ ವರ್ಗವಾರು ಸದಸ್ಯರ ಸ್ಥಾನಗಳನ್ನು ಮೀಸಲಿರಿಸಿ ನಿಗದಿಪಡಿಸುವ ಕುರಿತು ಈ ಕೆಳಗಿನಂತೆ ಮಾರ್ಗಸೂಚಿಯನ್ನು ಹೊರಡಿಸಿದೆ.

1. **ಒಟ್ಟು ಸ್ಥಾನಗಳ (ಸದಸ್ಯರ) ಸಂಖ್ಯೆ:**

a) **ತಾಲ್ಲೂಕು ಪಂಚಾಯತಿ:–** ಪ್ರಕರಣ 121 ರಂತೆ ತಾಲ್ಲೂಕು ಪಂಚಾಯತಿಯ ಜನಸಂಖ್ಯೆ ಪ್ರತಿ 10000 ಅಥವಾ ಅದರ ಭಾಗಕ್ಕೆ ಒಬ್ಬ ಸದಸ್ಯರಂತೆ ಸ್ಥಾನಗಳನ್ನು ರಾಜ್ಯ ಚುನಾವಣಾ ಆಯೋಗವು ನಿಗದಿಪಡಿಸುವುದು.

ಪರಂತು : ಒಂದು ಲಕ್ಷಕ್ಕಿಂತ ಹೆಚ್ಚಿಲ್ಲದ ಜನಸಂಖ್ಯೆ ಇರುವ ತಾಲ್ಲೂಕುಗಳಿಗೆ ಕನಿಷ್ಠ 11 ಜನರು ಸದಸ್ಯರಿರತಕ್ಕದ್ದು.

b) **ಜಿಲ್ಲಾ ಪಂಚಾಯತಿ:–** ಪ್ರಕರಣ 160 ರಂತೆ ಜಿಲ್ಲಾ ಪಂಚಾಯತಿಗೆ ಪ್ರತಿಯೊಂದು ತಾಲ್ಲೂಕಿನಿಂದ ಚುನಾಯಿತರಾಗತಕ್ಕ ಸದಸ್ಯರ ಸಂಖ್ಯೆಯನ್ನು 40000 ಅಥವಾ ಅದರ ಭಾಗಕ್ಕೆ ಒಬ್ಬ ಸದಸ್ಯರಂತೆ ಸ್ಥಾನಗಳನ್ನು ಸರ್ಕಾರವು ನಿಗದಿಪಡಿಸುವುದು.

ಪರಂತು :

(i) ಉತ್ತರ ಕನ್ನಡ ಜಿಲ್ಲೆ ಮತ್ತು ಚಿಕ್ಕಮಗಳೂರು ಜಿಲ್ಲೆಯ ಸಂದರ್ಭದಲ್ಲಿ ಜನಸಂಖ್ಯೆಯು ಮೂವತ್ತು ಸಾವಿರಕ್ಕೆ ಅಥವಾ ಅದರ ಭಾಗಕ್ಕೆ ಒಬ್ಬ ಸದಸ್ಯರಿರತಕ್ಕದ್ದು.

(ii) ಬೆಂಗಳೂರು ನಗರ ಜಿಲ್ಲೆಯ ಸಂದರ್ಭದಲ್ಲಿ, ಜನಸಂಖ್ಯೆಯ ಪ್ರತಿ ಇಪ್ಪತ್ತು ಸಾವಿರಕ್ಕೆ ಅಥವಾ ಅದರ ಭಾಗಕ್ಕೆ ಒಬ್ಬ ಸದಸ್ಯರಿರತಕ್ಕದ್ದು.

(iii) ಕೊಡಗು ಜಿಲ್ಲೆಯ ಸಂದರ್ಭದಲ್ಲಿ, ಜನಸಂಖ್ಯೆಯ ಪ್ರತಿ ಹದಿನೆಂಟು ಸಾವಿರಕ್ಕೆ ಅಥವಾ ಅದರ ಭಾಗಕ್ಕೆ ಒಬ್ಬ ಸದಸ್ಯರಿರತಕ್ಕದ್ದು.

2. **ಅನುಸೂಚಿತ ಜಾತಿಗಳಿಗಾಗಿ:**

a) **ತಾಲ್ಲೂಕು ಪಂಚಾಯತಿ:–** ಪ್ರಕರಣ 123(1) ರಂತೆ ತಾಲ್ಲೂಕಿನ ಒಟ್ಟು ಜನಸಂಖ್ಯೆಯಲ್ಲಿ ತಾಲ್ಲೂಕಿನ ಅನುಸೂಚಿತ ಜಾತಿಗಳ ಜನಸಂಖ್ಯೆಯು ಯಾವ ಅನುಪಾತದಲ್ಲಿದೆಯೋ ಹಾಗೆ ತಾಲ್ಲೂಕು ಪಂಚಾಯತಿಯಲ್ಲಿನ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಅನುಸೂಚಿತ ಜಾತಿಗಳಿಗಾಗಿ ಮೀಸಲಿಡಲಾದ ಸ್ಥಾನಗಳ ಸಂಖ್ಯೆಯು ಸರಿಸುಮಾರು ಅದೇ ಅನುಪಾತದಲ್ಲಿರತಕ್ಕದ್ದು.

ಜನಸಂಖ್ಯೆ ಎಂದರೆ 2001 ರ ಜನಗಣತಿಯ ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು.

ಉದಾ:–

$$\frac{\text{ತಾಲ್ಲೂಕಿನ ಅ.ಜಾತಿಯ ಒಟ್ಟು ಜನಸಂಖ್ಯೆ}}{\text{ತಾಲ್ಲೂಕಿನ ಒಟ್ಟು ಜನಸಂಖ್ಯೆ}} \times \text{ ಒಟ್ಟು ಸ್ಥಾನಗಳ ಸಂಖ್ಯೆ} = \text{ಅ.ಜಾ ಸ್ಥಾನ}$$

$$\frac{15453}{131736} \times 14 = 1.64 = 2 \text{ ಸ್ಥಾನಗಳು}$$

ಹೀಗೆ ಸರಾಸರಿ ಅನುಪಾತ ಲೆಕ್ಕಹಾಕಿದಾಗ ಉಳಿದ ಅಪೂರ್ಣಾಂಶವು 0.50ಕ್ಕಿಂತ ಕಡಿಮೆ ಇದ್ದಲ್ಲಿ ಅದನ್ನು ಬಿಟ್ಟುಬಿಡತಕ್ಕದ್ದು. 0.50 ಅಥವಾ ಅದಕ್ಕಿಂತ ಹೆಚ್ಚಿದ್ದಲ್ಲಿ ಅದನ್ನು ಒಂದು ಸ್ಥಾನವೆಂದು ಪರಿಗಣಿಸತಕ್ಕದ್ದು.

ಒಂದು ವೇಳೆ ಮೇಲ್ಕಂಡ ಲೆಕ್ಕಾಚಾರದಂತೆ ಅನುಸೂಚಿತ ಜಾತಿಯವರಿಗೆ ಒಂದು ಸ್ಥಾನವು ಸಹ ಲಭ್ಯವಾಗದೆ ಹೋದಲ್ಲಿ ಪ್ರಕರಣ 123(1)ರ ಪರಂತುಕದಂತೆ ಕನಿಷ್ಠ ಒಂದು ಸ್ಥಾನವನ್ನು ಮೀಸಲಿರಿಸತಕ್ಕದ್ದು.

b) **ಜಿಲ್ಲಾ ಪಂಚಾಯತಿ:–** ಪ್ರಕರಣ 162(1) ರಂತೆ ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಜಿಲ್ಲೆಯ ಅನುಸೂಚಿತ ಜಾತಿಗಳ ಜನಸಂಖ್ಯೆಯು ಯಾವ ಅನುಪಾತದಲ್ಲಿದೆಯೋ ಹಾಗೆ ಜಿಲ್ಲಾ ಪಂಚಾಯತಿಯಲ್ಲಿನ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಅನುಸೂಚಿತ ಜಾತಿಗಳಿಗಾಗಿ ಮೀಸಲಿಡಲಾದ ಸ್ಥಾನಗಳ ಸಂಖ್ಯೆಯು ಸರಿಸುಮಾರು ಅದೇ ಅನುಪಾತದಲ್ಲಿರತಕ್ಕದ್ದು.

ಜನಸಂಖ್ಯೆ ಎಂದರೆ 2001 ರ ಜನಗಣತಿಯ ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು.

ಉದಾ:–

$$\frac{\text{ಜಿಲ್ಲೆಯ ಅ.ಜಾತಿಯ ಒಟ್ಟು ಜನಸಂಖ್ಯೆ}}{\text{ಜಿಲ್ಲೆಯ ಒಟ್ಟು ಜನಸಂಖ್ಯೆ}} \times \text{ ಒಟ್ಟು ಸ್ಥಾನಗಳ ಸಂಖ್ಯೆ} = \text{ಅ.ಜಾ ಸ್ಥಾನ}$$

$$\frac{204880}{802950} \times 21 = 5.36 = 5 \text{ ಸ್ಥಾನಗಳು}$$

ಹೀಗೆ ಸರಾಸರಿ ಅನುಪಾತ ಲೆಕ್ಕಹಾಕಿದಾಗ ಉಳಿದ ಅಪೂರ್ಣಾಂಶವು 0.50ಕ್ಕಿಂತ ಕಡಿಮೆ ಇದ್ದಲ್ಲಿ ಅದನ್ನು ಬಿಟ್ಟುಬಿಡತಕ್ಕದ್ದು. 0.50 ಅಥವಾ ಅದಕ್ಕಿಂತ ಹೆಚ್ಚಿದ್ದಲ್ಲಿ ಅದನ್ನು ಒಂದು ಸ್ಥಾನವೆಂದು ಪರಿಗಣಿಸತಕ್ಕದ್ದು.

ಒಂದು ವೇಳೆ ಮೇಲ್ಕಂಡ ಲೆಕ್ಕಾಚಾರದಂತೆ ಅನುಸೂಚಿತ ಜಾತಿಯವರಿಗೆ ಒಂದು ಸ್ಥಾನವು ಸಹ ಲಭ್ಯವಾಗದೆ ಹೋದಲ್ಲಿ ಪ್ರಕರಣ 162(1)ರ ಪರಂತುಕದಂತೆ ಕನಿಷ್ಠ ಒಂದು ಸ್ಥಾನವನ್ನು ಮೀಸಲಿರಿಸತಕ್ಕದ್ದು.

3. **ಅನುಸೂಚಿತ ಪಂಗಡಗಳಿಗಾಗಿ**

a) **ತಾಲ್ಲೂಕು ಪಂಚಾಯತಿ:–** ಪ್ರಕರಣ 123(1) ರಂತೆ ತಾಲ್ಲೂಕಿನ ಒಟ್ಟು ಜನಸಂಖ್ಯೆಯಲ್ಲಿ ತಾಲ್ಲೂಕಿನ ಅನುಸೂಚಿತ ಪಂಗಡಗಳ ಜನಸಂಖ್ಯೆಯು ಯಾವ ಅನುಪಾತದಲ್ಲಿದೆಯೋ ಹಾಗೆ ತಾಲ್ಲೂಕು ಪಂಚಾಯತಿಯಲ್ಲಿನ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಅನುಸೂಚಿತ ಪಂಗಡಗಳಿಗಾಗಿ ಮೀಸಲಿಡಲಾದ ಸ್ಥಾನಗಳ ಸಂಖ್ಯೆಯು ಸರಿಸುಮಾರು ಅದೇ ಅನುಪಾತದಲ್ಲಿರತಕ್ಕದ್ದು.

ಜನಸಂಖ್ಯೆ ಎಂದರೆ 2001 ರ ಜನಗಣತಿಯ ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು.

ಉದಾ:–

$$\frac{\text{ತಾಲ್ಲೂಕಿನ ಅ.ಪಂ. ಒಟ್ಟು ಜನಸಂಖ್ಯೆ}}{\text{ತಾಲ್ಲೂಕಿನ ಒಟ್ಟು ಜನಸಂಖ್ಯೆ}} \times \text{ ಒಟ್ಟು ಸ್ಥಾನಗಳ ಸಂಖ್ಯೆ} = \text{ಅ.ಪಂ ಸ್ಥಾನ}$$

$$\frac{11971}{167573} \times 17 = 1.21 = 1 \text{ ಸ್ಥಾನಗಳು}$$

ಹೀಗೆ ಸರಾಸರಿ ಅನುಪಾತ ಲೆಕ್ಕಹಾಕಿದಾಗ ಉಳಿದ ಅಪೂರ್ಣಾಂಶವು 0.50ಕ್ಕಿಂತ ಕಡಿಮೆ ಇದ್ದಲ್ಲಿ ಅದನ್ನು ಬಿಟ್ಟುಬಿಡತಕ್ಕದ್ದು. 0.50 ಅಥವಾ ಅದಕ್ಕಿಂತ ಹೆಚ್ಚಿದ್ದಲ್ಲಿ ಅದನ್ನು ಒಂದು ಸ್ಥಾನವೆಂದು ಪರಿಗಣಿಸತಕ್ಕದ್ದು.

ಒಂದು ವೇಳೆ ಮೇಲ್ಕಂಡ ಲೆಕ್ಕಾಚಾರದಂತೆ ಅನುಸೂಚಿತ ಪಂಗಡದವರಿಗೆ ಒಂದು ಸ್ಥಾನವು ಸಹ ಲಭ್ಯವಾಗದೆ ಹೋದಲ್ಲಿ ಪ್ರಕರಣ 123(1)ರ ಪರಂತುಕದಂತೆ ಕನಿಷ್ಠ ಒಂದು ಸ್ಥಾನವನ್ನು ಮೀಸಲಿರಿಸತಕ್ಕದ್ದು.

b) **ಜಿಲ್ಲಾ ಪಂಚಾಯತಿ:-** ಪ್ರಕರಣ 162(1) ರಂತೆ ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಜಿಲ್ಲೆಯ ಅನುಸೂಚಿತ ಪಂಗಡಗಳ ಜನಸಂಖ್ಯೆಯು ಯಾವ ಅನುಪಾತದಲ್ಲಿದೆಯೋ ಹಾಗೆ ಜಿಲ್ಲಾ ಪಂಚಾಯತಿಯಲ್ಲಿನ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಅನುಸೂಚಿತ ಪಂಗಡಗಳಿಗಾಗಿ ಮೀಸಲಿಡಲಾದ ಸ್ಥಾನಗಳ ಸಂಖ್ಯೆಯು ಸರಿಸುಮಾರು ಅದೇ ಅನುಪಾತದಲ್ಲಿರತಕ್ಕದ್ದು.

ಜನಸಂಖ್ಯೆ ಎಂದರೆ 2001 ರ ಜನಗಣತಿಯ ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು.

ಉದಾ:-

$$\frac{\text{ಜಿಲ್ಲೆಯ ಅ.ಪಂ ಒಟ್ಟು ಜನಸಂಖ್ಯೆ}}{\text{ಜಿಲ್ಲೆಯ ಒಟ್ಟು ಜನಸಂಖ್ಯೆ}} \times \text{ಒಟ್ಟು ಸ್ಥಾನಗಳ ಸಂಖ್ಯೆ} = \text{ಅ.ಪಂ ಸ್ಥಾನ}$$

$$\frac{125937}{927951} \times 27 = 3.66 = 4 \text{ ಸ್ಥಾನಗಳು}$$

ಹೀಗೆ ಸರಾಸರಿ ಅನುಪಾತ ಲೆಕ್ಕಹಾಕಿದಾಗ ಉಳಿದ ಅಪೂರ್ಣಾಂಶವು 0.50ಕ್ಕಿಂತ ಕಡಿಮೆ ಇದ್ದಲ್ಲಿ ಅದನ್ನು ಬಿಟ್ಟುಬಿಡತಕ್ಕದ್ದು. 0.50 ಅಥವಾ ಅದಕ್ಕಿಂತ ಹೆಚ್ಚಿದ್ದಲ್ಲಿ ಅದನ್ನು ಒಂದು ಸ್ಥಾನವೆಂದು ಪರಿಗಣಿಸತಕ್ಕದ್ದು.

ಒಂದು ವೇಳೆ ಮೇಲ್ಕಂಡ ಲೆಕ್ಕಾಚಾರದಂತೆ ಅನುಸೂಚಿತ ಜಾತಿಯವರಿಗೆ ಒಂದು ಸ್ಥಾನವು ಸಹ ಲಭ್ಯವಾಗದೆ ಹೋದಲ್ಲಿ ಪ್ರಕರಣ 162(1)ರ ಪರಂತುಕದಂತೆ ಕನಿಷ್ಠ ಒಂದು ಸ್ಥಾನವನ್ನು ಮೀಸಲಿರಿಸತಕ್ಕದ್ದು.

4. **ಹಿಂದುಳಿದ ವರ್ಗದವರಿಗಾಗಿ**

**ತಾಲ್ಲೂಕು/ ಜಿಲ್ಲಾ ಪಂಚಾಯತಿ:-** ಪ್ರಕರಣ 123(2) ಹಾಗೂ 162(2) ರಂತೆ ಅನುಕ್ರಮವಾಗಿ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಯ ಸ್ಥಾನಗಳ ಒಟ್ಟು ಸ್ಥಾನಗಳ ಸರಿಸುಮಾರು ಮೂರನೇ ಒಂದರಷ್ಟು ಸಂಖ್ಯೆಯ ಸ್ಥಾನಗಳನ್ನು ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸತಕ್ಕದ್ದು.

ಉದಾ:-

$$\frac{\text{ಪಂಚಾಯತಿ ಒಟ್ಟು ಸ್ಥಾನಗಳ ಸಂಖ್ಯೆ}}{3} = \text{ಹಿಂದುಳಿದ ವರ್ಗಗಳ ಸ್ಥಾನ}$$

$$\frac{23}{3} = 7.66 = 8 \text{ ಸ್ಥಾನಗಳು}$$

ಉಳಿದ ಅಪೂರ್ಣಾಂಶವು 0.50ಕ್ಕಿಂತ ಕಡಿಮೆ ಇದ್ದಲ್ಲಿ ಅದನ್ನು ಬಿಟ್ಟುಬಿಡತಕ್ಕದ್ದು. 0.50 ಅಥವಾ ಅದಕ್ಕಿಂತ ಹೆಚ್ಚಿದ್ದಲ್ಲಿ ಅದನ್ನು ಒಂದು ಸ್ಥಾನವೆಂದು ಪರಿಗಣಿಸತಕ್ಕದ್ದು.

ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಆಧ್ಯಾದೇಶ 2010 ರಂತೆ ಪ್ರಕರಣ 123(2) ಮತ್ತು 162(2) ಪ್ರಕರಣದಡಿಯಲ್ಲಿ ಮೇಲ್ಕಂಡಂತೆ ಹಿಂದುಳಿದ ವರ್ಗದವರಿಗೆ ಸ್ಥಾನಗಳನ್ನು ನಿರ್ಧರಿಸಿದ ನಂತರ ಅನುಸೂಚಿತ ಜಾತಿ, ಅನುಸೂಚಿತ ಪಂಗಡ ಮತ್ತು ಹಿಂದುಳಿದ ವರ್ಗದವರಿಗಾಗಿ ಮೀಸಲಿರಿಸಿದ ಸ್ಥಾನಗಳ ಒಟ್ಟು ಸಂಖ್ಯೆಯು ಆ ಪಂಚಾಯತಿಯಲ್ಲಿಯ ಒಟ್ಟು ಸ್ಥಾನಗಳ ಸಂಖ್ಯೆಯ ಶೇಕಡ 50 ನ್ನು ಮೀರತಕ್ಕದ್ದಲ್ಲ.

ಒಂದು ವೇಳೆ ಅನುಸೂಚಿತ ಜಾತಿ, ಅನುಸೂಚಿತ ಪಂಗಡ ಮತ್ತು ಹಿಂದುಳಿದ ವರ್ಗದವರಿಗಾಗಿ ಮೀಸಲಿರಿಸಬೇಕಾದ ಸ್ಥಾನಗಳ ಒಟ್ಟು ಸಂಖ್ಯೆಯು ಆ ಪಂಚಾಯತಿಯಲ್ಲಿಯ ಒಟ್ಟು ಸ್ಥಾನಗಳ ಸಂಖ್ಯೆಯ ಶೇಕಡ 50 ನ್ನು ಮೀರುವ ಸಂದರ್ಭದಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳಿಗೆ ನಿಗದಿಪಡಿಸಿದ ಸ್ಥಾನಗಳಲ್ಲಿ ಯಾವುದೇ ಬದಲಾವಣೆ ಮಾಡದೆ ಹಿಂದುಳಿದ ವರ್ಗದಲ್ಲಿ ನಿಗದಿಪಡಿಸಿದ ಸ್ಥಾನಗಳಲ್ಲಿ ಕಡಿತಗೊಳಿಸಿ ಒಟ್ಟು ಮೂರು ಪ್ರವರ್ಗದ ಸ್ಥಾನಗಳು ಶೇಕಡ 50 ಕ್ಕೆ ಸೀಮಿತಗೊಳಿಸುವುದು.

5. **ಹಿಂದುಳಿದ ಅ ಮತ್ತು ಬ ವರ್ಗದವರಿಗಾಗಿ :**

ಹೀಗೆ ಹಿಂದುಳಿದ ವರ್ಗದವರಿಗೆ ಮೀಸಲಿರಿಸಿದ ಸ್ಥಾನಗಳ ಪೈಕಿ ಅಂಥ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿನ ಶೇ.80ರಷ್ಟು ಸ್ಥಾನಗಳನ್ನು 'ಎ' ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಗೆ ಮೀಸಲಿರಿಸತಕ್ಕದ್ದು ಮತ್ತು ಉಳಿದ ಶೇ. 20ರಷ್ಟು ಸ್ಥಾನಗಳನ್ನು 'ಬಿ' ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಗೆ ಮೀಸಲಿರಿಸತಕ್ಕದ್ದು.

ಉದಾ: ಹಿಂದುಳಿದ ವರ್ಗದವರಿಗಾಗಿ ಮೀಸಲಿಟ್ಟ ಸ್ಥಾನಗಳು ಒಟ್ಟು = 8

BC= 8 → 80%= 6.40 = 6 BCA
BC= 8 → 20%= 1.60 = 2 BCB

ಹೀಗೆ ಸರಾಸರಿ ಅನುಪಾತ ಲೆಕ್ಕಹಾಕಿದಾಗ ಉಳಿದ ಅಪೂರ್ಣಾಂಶವು 0.50ಕ್ಕಿಂತ ಕಡಿಮೆ ಇದ್ದಲ್ಲಿ ಅದನ್ನು ಬಿಟ್ಟುಬಿಡತಕ್ಕದ್ದು. 0.50 ಅಥವಾ ಅದಕ್ಕಿಂತ ಹೆಚ್ಚಿದ್ದಲ್ಲಿ ಅದನ್ನು ಒಂದು ಸ್ಥಾನವೆಂದು ಪರಿಗಣಿಸತಕ್ಕದ್ದು.

**6. ಸಾಮಾನ್ಯ (ಮೀಸಲಿಡದ) ಸ್ಥಾನಗಳು:**

ತಾಲ್ಲೂಕು/ ಜಿಲ್ಲಾ ಪಂಚಾಯತಿಗೆ ನಿಗದಿಪಡಿಸಿದ ಒಟ್ಟು ಸ್ಥಾನಗಳಲ್ಲಿ 1) ಅನುಸೂಚಿತ ಜಾತಿ 2) ಅನುಸೂಚಿತ ಪಂಗಡ ಮತ್ತು 3) ಹಿಂದುಳಿದ ವರ್ಗದವರಿಗೆ ಹಂಚಿಕೆ ಮಾಡಿರುವ ಸ್ಥಾನಗಳನ್ನು ಕಳೆದು ಉಳಿದ ಸ್ಥಾನಗಳನ್ನು ಸಾಮಾನ್ಯ ವರ್ಗದವರಿಗಾಗಿ ಮೀಸಲಿಡತಕ್ಕದ್ದು.

**7. ಮಹಿಳೆಯರಿಗಾಗಿ ಮೀಸಲಾತಿ**

ಪ್ರಕರಣ 123(3) ಹಾಗೂ 162(3) ರಂತೆ ಅನುಕ್ರಮವಾಗಿ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಯ ಪ್ರತಿ ವರ್ಗದಲ್ಲಿ (ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ಹಿಂದುಳಿದ ವರ್ಗ ಮತ್ತು ಸಾಮಾನ್ಯ) ನಿಗದಿಪಡಿಸಿದ ಸ್ಥಾನಗಳ ಸಂಖ್ಯೆಯಲ್ಲಿ ಶೇಕಡ 50% ಕ್ಕಿಂತ ಕಡಿಮೆಯಿಲ್ಲದಷ್ಟು ಸಂಖ್ಯೆಯ ಸ್ಥಾನಗಳನ್ನು ಮಹಿಳೆಯರಿಗಾಗಿ ಮೀಸಲಿಡತಕ್ಕದ್ದು.

ಶೇಕಡ 50 ಕ್ಕಿಂತ ಕಡಿಮೆ ಇಲ್ಲದಷ್ಟು ಅಂದರೆ ಲೆಕ್ಕ ಹಾಕಿದಾಗ ಉಳಿದ ಅಪೂರ್ಣಾಂಶವು ಎಷ್ಟೇ ಇದ್ದರೂ ಅದನ್ನು ಒಂದು ಸ್ಥಾನವೆಂದು ಪರಿಗಣಿಸತಕ್ಕದ್ದು.

ಉದಾಹರಣೆ ಈ ಕೆಳಕಂಡಂತೆ ಇದೆ.

| ಒಟ್ಟು ಸ್ಥಾನ | ಶೇಕಡ 50% | ಮಹಿಳಾ ಸ್ಥಾನ |
|---|---|---|
| 1 | 0.50 | 1 |
| 2 | 1.00 | 1 |
| 3 | 1.50 | 2 |
| 4 | 2.00 | 2 |
| 5 | 2.50 | 3 |

| ಒಟ್ಟು ಸ್ಥಾನ | ಶೇಕಡ 50% | ಮಹಿಳಾ ಸ್ಥಾನ |
|---|---|---|
| 6 | 3.00 | 3 |
| 7 | 3.50 | 4 |
| 8 | 4.00 | 4 |
| 9 | 4.50 | 5 |
| 10 | 5.00 | 5 |

**8. ಹಿಂದುಳಿದ ವರ್ಗದಲ್ಲಿ ಮಹಿಳೆಯರಿಗಾಗಿ ಮೀಸಲಿರಿಸಿದ ಒಟ್ಟು ಸ್ಥಾನಗಳ ಪೈಕಿ** ಶೇ.80ರಷ್ಟು ಸ್ಥಾನಗಳನ್ನು 'ಎ' ಪ್ರವರ್ಗಕ್ಕೆ ಹಾಗೂ ಉಳಿದ ಶೇ.20ರಷ್ಟು ಸ್ಥಾನಗಳನ್ನು 'ಬಿ' ಪ್ರವರ್ಗಕ್ಕೆ ಮೀಸಲಿರಿಸತಕ್ಕದ್ದು. ವಿನ: 'ಎ' ಪ್ರವರ್ಗಕ್ಕೆ ಪ್ರತ್ಯೇಕವಾಗಿ ಹಾಗೂ 'ಬಿ' ಪ್ರವರ್ಗಕ್ಕೆ ಪ್ರತ್ಯೇಕವಾಗಿ ಮಹಿಳೆ ಸ್ಥಾನವನ್ನು ಮೀಸಲಿಡುವಂತಿಲ್ಲ. ಹೀಗೆ ಶೇ.80 ಹಾಗೂ ಶೇ.20ರಂತೆ ಮರು ಹಂಚಿಕೆ ಮಾಡಲಾದ ಮಹಿಳೆಯರ ಒಟ್ಟು ಸ್ಥಾನಗಳು ಹಿಂದುಳಿದ ವರ್ಗಕ್ಕೆ ಮಹಿಳೆಯರಿಗಾಗಿ ನಿಗದಿಪಡಿಸಲಾದ ಒಟ್ಟು ಸ್ಥಾನಗಳ ಸಂಖ್ಯೆಯನ್ನು ಮೀರಬಾರದು.

ಮೀಸಲಿರಿಸಿದ ಒಟ್ಟು ಸ್ಥಾನಗಳಲ್ಲಿ ಶೇ.80 ಮತ್ತು ಶೇ.20 ರಷ್ಟು ಸ್ಥಾನಗಳನ್ನು ಲೆಕ್ಕಹಾಕುವಾಗ ಅಪೂರ್ಣಾಂಶವು 0.50 ಅಥವಾ ಅದಕ್ಕಿಂತ ಹೆಚ್ಚಿದ್ದಲ್ಲಿ ಮಾತ್ರ ಒಂದು ಸ್ಥಾನವೆಂದು ಪರಿಗಣಿಸತಕ್ಕದ್ದು.

ಉದಾ: ಹಿಂದುಳಿದ ಮಹಿಳೆಯರಿಗೆ ಮೀಸಲಿಟ್ಟ ಸ್ಥಾನಗಳು ಒಟ್ಟು : 6

6 → 80%= 4.80 = 5 BCA
6 → 20%= 1.20 = 1 BCB

ಆದೇಶದ ಮೇರೆಗೆ

ಸಿ.ಆರ್.ರೇವಣ್ಣ
ಅಧೀನ ಕಾರ್ಯದರ್ಶಿ
ರಾಜ್ಯ ಚುನಾವಣಾ ಆಯೋಗ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ3) (300 ಪ್ರತಿಗಳು)